# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 857
2. ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್)
3. ಉತ್ತರಿಸಬೇಕಾದ ದಿನಾಂಕ : 18–12–2018
4. ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಹೇಮಾವತಿ ಜಲಾನಯನ ನಾಲಾ ವ್ಯಾಪ್ತಿಗೆ ಬರುವ ತುಮಕೂರು ನಾಲಾ ವಲಯಕ್ಕೆ ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳು ಸೇರ್ಪಡೆಯಾಗುತ್ತವೆ; | ಹೇಮಾವತಿ ನಾಲಾ ವಲಯದ ವ್ಯಾಪ್ತಿಗೆ ತುಮಕೂರು ಜಿಲ್ಲೆಯ ತಿಪಟೂರು, ತುರುವೇಕೆರೆ, ಗುಬ್ಬಿ, ತುಮಕೂರು, ಕುಣಿಗಲ್ ಹಾಗೂ ಕೊರಟಗೆರೆ ತಾಲ್ಲೂಕುಗಳು ಸೇರ್ಪಡೆಯಾಗಿರುತ್ತವೆ. |
| ಆ | ಈ ಬಾರಿಬಿದ್ದ ಭಾರಿ ಮಳೆಯಿಂದಾಗಿ ತುಂಬಿದ ಹೇಮಾವತಿ ಜಲಾಶಯದಿಂದ ತುಮಕೂರು ನಾಲಾ ವಲಯಕ್ಕೆ ಕಾಲುವೆಗಳ ಮೂಲಕ ನೀರನ್ನು ಹರಿಸಲಾಗಿದೆಯೇ; | ಹೌದು. |
| ಇ | ಹಾಗಿದ್ದಲ್ಲಿ ಈ ವ್ಯಾಪ್ತಿಯ ಯಾವ ಯಾವ ತಾಲ್ಲೂಕಿನ ಕೆರೆಗಳಿಗೆ ಎಷ್ಟು ಪ್ರಮಾಣದಲ್ಲಿ ನೀರನ್ನು ತುಂಬಿಸಲಾಗಿದೆ; (ವಿವರ ನೀಡುವುದು) | ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆಯಡಿ ತುಂಬಿಸಲಾಗಿರುವ ತಾಲ್ಲೂಕುವಾರು ಕೆರೆಗಳ ವಿವರ ಕೆಳಕಂಡಂತಿದೆ : (see table below) |

| ಕ್ರ ಸಂ | ತಾಲ್ಲೂಕು | ಕೆರೆಗಳ ಸಂಖ್ಯೆ | ನೀರು ಹರಿಸಿರುವ ಪ್ರಮಾಣ. ಎಂ.ಸಿ.ಎಫ್.ಟಿ |
|---|---|---|---|
| 1 | ತಿಪಟೂರು | 23 | 283.48 |
| 2 | ಅರಸೀಕೆರೆ | 05 | 74.00 |
| 3 | ಕಡೂರು | 01 | 15.00 |
| 4 | ಹೊಸದುರ್ಗ | 01 | 10.20 |
| 5 | ಚಿಕ್ಕನಾಯಕನಹಳ್ಳಿ | 05 | 128.18 |
| 6 | ತುರುವೇಕೆರೆ | 05 | 311.77 |
| 7 | ಗುಬ್ಬಿ | 19 | 174.51 |
| 8 | ತುಮಕೂರು | 59 | 936.33 |
| 9 | ಕುಣಿಗಲ್ | 01 | 76.00 |
| 10 | ನಾಗಮಂಗಲ | 02 | 122.00 |
| 11 | ಮಧುಗಿರಿ & ಕೊರಟಗೆರೆ | 02 | 84.74 |
| 12 | ಶಿರಾ | 02 | 885.32 |
| | **ಒಟ್ಟು :–** | **125** | **3101.53** |

ಹೇಮಾವತಿ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಸಣ್ಣ ನೀರಾವರಿ ಹಾಗೂ ಇತರೆ ಇಲಾಖೆಗೆ ಸೇರಿದ ಕೆರೆಗಳಿಗೆ ಹರಿಸಲಾಗಿರುವ ನೀರಿನ ಪ್ರಮಾಣದ ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ :

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td>

| ಕ್ರ ಸಂ | ತಾಲ್ಲೂಕು | ಒಟ್ಟು ಕೆರೆಗಳ ಸಂಖ್ಯೆ | ಕೆರೆಗಳ ಒಟ್ಟು ಸಾಮರ್ಥ್ಯ ಎಂ.ಸಿ.ಎಫ್.ಟಿ | ನೀರು ಹರಿಸಿರುವ ಪ್ರಮಾಣ. ಎಂ.ಸಿ.ಎಫ್.ಟಿ |
|---|---|---|---|---|
| 1 | ತಿಪಟೂರು | 19 | 588.93 | 395.24 |
| 2 | ತುರುವೇಕೆರೆ | 68 | 1657.45 | 1692.28 |
| 3 | ಗುಬ್ಬಿ | 66 | 2634.98 | 1004.44 |
| 4 | ತುಮಕೂರು | 24 | 382.57 | 291.34 |
| 5 | ಕುಣಿಗಲ್ | 06 | 352.18 | 21.00 |
| | ನಾಗಮಂಗಲ | 56 | 460.32 | 607.55 |
| | ಒಟ್ಟು :- | **215** | **6076.43** | **4011.85** |

</td></tr>
<tr><td>ಈ</td><td>ತುಮಕೂರು ನಾಲಾ ವಲಯಕ್ಕೆ ನೀರನ್ನು ತುಂಬಿಸುವಾಗ ನಿಯಮಗಳನ್ನು ಪಾಲಿಸದೆ ಹಾಗೂ ಬರ ಪೀಡಿತ ತಾಲ್ಲೂಕುಗಳಿಗೆ ಆದ್ಯತೆ ನೀಡದೆ ಅಸಮರ್ಪಕವಾಗಿ ಅಧಿಕಾರಿಗಳು ಕಾರ್ಯ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)</td><td>ನೀರಾವರಿ ಸಲಹಾ ಸಮಿತಿ ನಿರ್ಣಯದಂತೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಸಂಬಂಧಪಟ್ಟ ಕೆರೆಗಳಿಗೆ ಹಾಗೂ ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ಹರಿಸಲು ಕ್ರಮ ಕೈಗೊಳ್ಳಲಾಗಿದೆ.<br><br>ದಿನಾಂಕ:05-09-2018 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲೆಯ ಜನ ಪ್ರತಿನಿಧಿಗಳ ಸಭೆಯಲ್ಲಿ ನಿರ್ಣಯಿಸಿದಂತೆ, ಸೆಪ್ಟೆಂಬರ್ ಮಾಹೆಯ ವೇಳಾ ಪಟ್ಟಿಯಂತೆ ಕುಡಿಯುವ ನೀರಿನ ಯೋಜನೆ ಕೆರೆಗಳಿಗೆ ಆದ್ಯತೆ ನೀಡಿ ನೀರು ಹರಿಸಲಾಗಿದೆ.<br><br>ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:31-10-2018 ರಂದು ನಡೆದ ಸಭೆಯಲ್ಲಿ ಶಿರಾ, ಕಳ್ಳಂಬೆಳ್ಳ, ಬುಗುಡನಹಳ್ಳಿ, ಸಿ.ಎಸ್.ಪುರ ಹಾಗೂ ನಾಲಾ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ ನೀರನ್ನು ಹರಿಸಲು ಕೈಗೊಂಡ ತೀರ್ಮಾನದಂತೆ ಅಕ್ಟೋಬರ್ ಮತ್ತು ನವೆಂಬರ್ ಮಾಹೆಯಲ್ಲಿ ಮತ್ತೊಂದು ವೇಳಾ ಪಟ್ಟಿಯನ್ನು ಸಿದ್ಧಪಡಿಸಿ ಅದರನ್ವಯ ನೀರನ್ನು ಹರಿಸಲಾಗಿರುತ್ತದೆ.<br><br>ನೀರಿನ ಅಸಮರ್ಪಕ ನಿರ್ವಹಣೆ ಬಗ್ಗೆ ಯಾವುದೇ ದೂರು ಗಮನಕ್ಕೆ ಬಂದಿರುವುದಿಲ್ಲ.</td></tr>
<tr><td>ಉ</td><td>ಜನ ಜನಾವಾರುಗಳಿಗೆ ಕುಡಿಯುವ ನೀರಿಗೆ ಆದ್ಯತೆ ನೀಡಿ, ಈ ಜಿಲ್ಲೆಯ ವ್ಯಾಪ್ತಿಗೆ ಬರುವ ಬರಪೀಡಿತ ತಾಲ್ಲೂಕುಗಳಿಗೆ ಮೊಟ್ಟ ಮೊದಲು ಕೆರೆಗಳಿಗೆ ನೀರನ್ನು ತುಂಬಿಸುವ ಕಾರ್ಯವನ್ನು ಮಾಡಲಾಗುವುದೇ ಸ್ಪಷ್ಟಪಡಿಸುವುದು?</td><td>ನೀರಿನ ಲಭ್ಯತೆಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
</table>

*ಸಂಖ್ಯೆ:ಜಸಂಇ 70 ಎನ್‌ಎಲ್‌ಎ 2018*

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು